



## ಅಳಿವಿನತ್ತ ಬೆತ್ತದ ಕರಕುಶಲ ಕಲೆ

ಬೆಟ್ಟ ಗುಡ್ಡಗಳ ತಪ್ಪಲಿನಲ್ಲಿ ಬೆಳೆದ ಬೆತ್ತವನ್ನು ತಂದು ಬೇಕಾದಂತೆ ಬಳಸಿ, ಅದರಿಂದ ಸುಂದರ ಕಲಾಕೃತಿಯ ರೂಪವನ್ನು ಹೊರ ತೆಗೆಯುವುದು ಅಸಾಮಾನ್ಯ ಕಾರ್ಯ. ಈ ತಯಾರಿಕೆ ಕಾರ್ಯವು ನೋಡಲು ತುಂಬಾ ಸಲೀಸಂತೆ ಕಂಡರೂ, ಇದಕ್ಕಾಗಿಯೇ ಬಹಳಷ್ಟು ವರ್ಷದ ಅನುಭವ, ಕ್ರಿಯಾಶೀಲತೆ, ತಾಳ್ಮೆ ಬೇಕು. ಬೆತ್ತ ಮತ್ತು ಕೆಲವೊಂದಷ್ಟು ಕಾಡು ಬಳ್ಳಿಗಳನ್ನು ಬಳಸಿ ತಮ್ಮದೇ ಶೈಲಿಯಲ್ಲಿ ಹೂವಿನ ಬುಟ್ಟಿ, ಟೀ ಟ್ರೇ, ಬೆತ್ತದ ಕುರ್ಚಿ, ಚಿಕ್ಕಚಿಕ್ಕ ಡಬ್ಬಿ, ಪೂಜಾ ಸಾಮಗ್ರಿಯ ಪೆಟ್ಟಿಗೆ, ಶೋ ಪೀಸ್ ಕಲಾಕೃತಿಗಳನ್ನು ತಯಾರಿಸುವುದು ಕರಕುಶಲ ಕರ್ಮಿಗಳ ಗಮನಾರ್ಹ ಕಾರ್ಯ.

ಈ ಮೊದಲೆಲ್ಲ ಕರಕುಶಲ ಕರ್ಮಿಗಳು ಹೇರಳವಾಗಿ ಕಂಡುಬರುತ್ತಿದ್ದರು. ಆದರೆ ಈಗ ಅಂಥವರ ಪ್ರಮಾಣ ಕಡಿಮೆಯಾಗಿದೆ. ಕೆಲವರು ಇನ್ನೂ ಈ ಕಾರ್ಯದಲ್ಲಿ ತೊಡಗಿಕೊಂಡಿದ್ದರೂ ಸೂಕ್ತ ಮಾರುಕಟ್ಟೆ ದೊರಕದ ಕಾರಣ ಅಳಿವಿನತ್ತ ಈ ಕಲೆ ಸಾಗಿದೆ. ಪರಿಸರ ಸ್ನೇಹಿ ಈ ಉತ್ಪನ್ನಗಳ ಜಾಗವನ್ನು ಪ್ಲಾಸ್ಟಿಕ್ ಆಕ್ರಮಿಸಿದೆ. ಒಟ್ಟಾರೆಯಾಗಿ ಹೇಳುವುದಾದರೆ ಇಂತಹ ಕಲೆಗೆ ಮತ್ತು ಕರಕುಶಲಕರ್ಮಿಗಳಿಗೆ ಸರಿಯಾದ ಮಾನ್ಯತೆ ದೊರಕಬೇಕು.

–ಬಿ. ಶಶಾಂಕ ಪೈ, ಕಾರ್ಕಳ



## ಇಕ್ಕೇರಿ ಅಘೋರೇಶ್ವರ ಪ್ರತಿಕೃತಿ

ಸಾಗರ ತಾಲ್ಲೂಕಿನ ಇಕ್ಕೇರಿಯು ಅಘೋರೇಶ್ವರ ದೇವಸ್ಥಾನದಿಂದಲೇ ಪ್ರಸಿದ್ಧಿ. ಕೆಳದಿ ನಾಯಕರ 2ನೇ ರಾಜಧಾನಿಯಾಗಿದ್ದ ಇಕ್ಕೇರಿಯಲ್ಲಿ ಈ ಬೃಹತ್ ದೇವಾಲಯವಿದೆ. ಇದನ್ನು ದೊಡ್ಡ ಸಂಕಣ್ಣ ನಾಯಕರು 16ನೇ ಶತಮಾನದಲ್ಲಿ ಕಟ್ಟಿಸಿದ ಬಗ್ಗೆ 'ಶ್ರೀ ಶಿವತತ್ವರತ್ನಾಕರ'ದಲ್ಲಿ ಉಲ್ಲೇಖವಿದೆ.

ದೊಡ್ಡ ಸಂಕಣ್ಣ ನಾಯಕರು ತೀರ್ಥಯಾತ್ರೆಗೆ ಹೋಗಿ ಮರಳುವಾಗ 'ಪೈಠಾಣ್' ಎಂಬ ಊರಿನಲ್ಲಿ ಸುಂದರವಾದ ಅಘೋರೇಶ್ವರನ ಮೂರ್ತಿಯನ್ನು ನೋಡಿದ್ದರು. ಆ ಮೂರ್ತಿಗೆ ಮನಸೋತು ಅದರ ಚಿತ್ರವನ್ನು ಚಿತ್ರಿಸಿಕೊಂಡು ಇಕ್ಕೇರಿಗೆ ಬಂದು ಮೂವತ್ತೆರಡು ಭುಜವುಳ್ಳ ಶ್ರೀ ಅಘೋರೇಶ್ವರನ ಮೂರ್ತಿಯನ್ನು ಪ್ರತಿಷ್ಠಾಪಿಸಲು ನಿರ್ಧರಿಸಿದರಂತೆ. ಅಂತೆಯೇ 16ನೇ ಶತಮಾನದಲ್ಲಿ ಈ ದೇವಾಲಯ ನಿರ್ಮಾಣಗೊಳ್ಳುತ್ತದೆ. ನಂತರ 1637ರಲ್ಲಿ ಬಿಜಾಪುರದ ಆದಿಲ್ ಶಾಹಿಯ ರಣದುಲ್ಲಾಖಾನ ಎಂಬ ದಂಡನಾಯಕನ ದಾಳಿಯಿಂದ ಆ ಅದ್ಭುತ ಮೂರ್ತಿ ನಾಶವಾಗಿದ್ದು ದುರ್ದೈವ.

ಹೀಗಾಗಿ, ಅಘೋರೇಶ್ವರನ ಮೂಲ ಶಿಲಾ ಮೂರ್ತಿಯು ಇಂದು ನೋಡಲು ಸಿಗದು. ಆದರೆ ಅದರ ಪ್ರತಿರೂಪಗಳನ್ನು ಕೆಳದಿಯ ಪಾರ್ವತಿ ದೇಗುಲದ ಗರ್ಭಗುಡಿಯ ಮುಂಭಾಗದ ಮೇಲ್ಛಾವಣಿಯಲ್ಲಿ ಮರದಲ್ಲಿ ಕೆತ್ತಿರುವ ಮೂರ್ತಿಯ (ಚಿತ್ರದಲ್ಲಿ ಕಾಣುತ್ತಿರುವುದು) ಹಾಗೂ ಇಕ್ಕೇರಿ ದೇವಸ್ಥಾನದಲ್ಲಿ ಪಂಚಲೋಹದಿಂದ ಮಾಡಿದ ಅಘೋರೇಶ್ವರನ ಅಕ್ಷಯಾನಂದ ರೂಪದ ಉತ್ಸವ ಮೂರ್ತಿಯಲ್ಲೂ ಕಾಣಬಹುದು.

ಅಘೋರೇಶ್ವರನ ಸ್ವರೂಪದಲ್ಲಿ ಭಗವಾನ್ ಈಶ್ವರನು ಒಂದು ಮುಖ, ಮೂರು ಕಣ್ಣು, ಮೂವತ್ತೆರಡು ಕೈಗಳು, ಜಟಾಮುಕುಟ, ತಲೆಯಲ್ಲಿ ಶಶಿರೇಖೆ, ಕೊರಳಲ್ಲಿ ರುಂಡಮಾಲೆ, ಮುಖದಲ್ಲಿ ಸದಾನಂದವನ್ನು, ಬಲಭಾಗದ ಕೈಗಳಲ್ಲಿ ಅಭಯಮುದ್ರೆ, ಖಡ್ಗ, ಶೂಲ, ಚಕ್ರ, ಡಮರು, ಅಸ್ಥಿ, ಬಾಣ, ಗದಾ, ಪದ್ಮ, ಕಪಾಲ, ಕುಂತಾಯುಧ, ಜ್ಞಾನಮುದ್ರೆ, ಅಂಕುಶ, ರುದ್ರಾಕ್ಷಮಾಲೆ, ಖಟ್ವಾಂಗ, ಪರಶುವನ್ನು ಮತ್ತು ಎಡ ಭಾಗದ ಕೈಗಳಲ್ಲಿ ವರದ ಮುದ್ರೆ, ಫಲಕ, ಟಂಕ, ಪಾಶ, ಮುದ್ಗರ, ಸರ್ಪ, ಅಗ್ನಿ, ಮೃಗ, ಘಂಟೆ, ಧನಸ್ಸು, ರತ್ನ, ಕುಮುದ, ಕುಂಭ, ಖೇಟಕ, ಪುಸ್ತಕ ಹಾಗೂ ಕಟಿಹಸ್ತಮುದ್ರೆಗಳನ್ನು ಹೊಂದಿ ತನ್ನ ಸಕಲಾಯುಧಭೂಷಿತನಾಗಿದ್ದಾನೆ.

–ಅಂಜನ್ ಕಾಯ್ಕಿಣಿ, ಸಾಗರ

